**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ.ಸಿ. 1565/2020**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಡಿ ಡಬ್ಲ್ಯೂ. 01**

**ದಿನಾಂಕಃ 23.10.2024**

**ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಹೆಚ್ ಸಿ ಎಸ್ ವಕೀಲರಿಂದಃ**

ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಬ್ಯಾಂಕ್ ವ್ಯವಹಾರದ ಬಗ್ಗೆ ಅಷ್ಟು ಮಾಹಿತಿ ಇಲ್ಲ. ಬ್ಯಾಂಕಿಗೆ ಚೆಕ್ ನ್ನು ನಗದೀಕರಣಕ್ಕೆ ನೀಡಿದಾಗ ಏನಾಗಬಹುದು ಎಂದು ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ನಾನು ಎಸ್ ಬಿ ಐ ಮತ್ತು ಐಸಿಐಸಿಐ ಬ್ಯಾಂಕ್ ನಲ್ಲಿ ಖಾತೆಯನ್ನು ಹೊಂದಿದ್ದೇನೆ. ನನ್ನ ಎಸ್ ಬಿ ಐ ಬ್ಯಾಂಕ್ ಖಾತೆ ತೋಳುಹುಣಸೆ ಶಾಖೆ ಮತ್ತು ಐಸಿಐಸಿಐ ಬ್ಯಾಂಕ್ ಸಹ ತೋಳುಹುಣಸೆ ಶಾಖೆಯಲ್ಲಿ ಇದೆ. ನನ್ನ ಎಸ್ ಬಿ ಐ ಖಾತೆ ದಾವಣಗೆರೆಯ ಎ ಡಿ ಬಿ ಶಾಖೆಯಲ್ಲಿ ಸಹ ಇದೆ. ನಾನು ಬ್ಯಾಂಕ್ ವ್ಯವಹಾರವನ್ನು ಸುಮಾರು 15-16 ವರ್ಷಗಳಿಂದ ಮಾಡುತ್ತಿದ್ದೇನೆ. ನನ್ನ ಎಸ್ ಬಿ ಐ ಬ್ಯಾಂಕ್ ಖಾತೆ ತೋಳುಹುಣಸೆ ಶಾಖೆಯಲ್ಲಿ ಎಷ್ಟು ವರ್ಷಗಳಿಂದ ಸದರಿ ಖಾತೆಯನ್ನು ಹೊಂದಿದ್ದೇನೆ ಎಂದು ನನಗೆ ನೆನಪಿಲ್ಲ.

ನೀವು ನಿಮ್ಮ ಸಹಿಯನ್ನು ಯಾವಾಗಲೂ ಒಂದೇ ರೀತಿ ಮಾಡುತ್ತೀರಾ ಎಂದರೆ ಸಾಕ್ಷಿಯು ನನ್ನ ಖಾತೆಗೆ ಸಂಬಂದಿಸಿದಂತೆ ಒಂದೇ ರೀತಿ ಮಾಡುತ್ತೇನೆ ಹಾಗೂ ಬೇರೆ ದಾಖಲೆಗಳಿಗೆ ಒಂದು ರೀತಿ ಮಾಡುತ್ತೇನೆ ಎಂದು ನುಡಿಯುತ್ತಾರೆ. ನಿಪಿ.1 ನನ್ನ ಖಾತೆಗೆ ಸಂಬಂಧಿಸಿದ್ದು ಎಂದರೆ ಸರಿ. ನಿಪಿ.1 ರಲ್ಲಿರುವ ನಿಪಿ.1 (ಎ) ಸಹಿ ನನ್ನದು ಎಂದರೆ ಸರಿಯಲ್ಲ. ನಿಡಿ.1 ರಲ್ಲಿರುವ ಅರುಣ್ ಕೆ ಎಸ್ ಎಂದು ನಮೂದು ಇರುವ ಸಹಿ ನನ್ನದು ಎಂದರೆ ಸರಿ. ನಿಪಿ.1 (ಎ) ಮತ್ತು ನಿಡಿ.1 ರಲ್ಲಿರುವ ಅರುಣ್ ಕೆ ಎಸ್ ಎಂಬ ಸಹಿ ಗಳಲ್ಲಿ ಸಾಮ್ಯತೆ ಇದೆ ಎಂದರೆ ಸರಿಯಲ್ಲ. ಪಿರ್ಯಾದಿಗೆ ಹಣ ನೀಡಬೇಕಾಗುತ್ತದೆ ಎಂದು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಅವರ ವಕಾಲತ್ ತೋರಿಸಿ ಅದರಲ್ಲಿರುವ ಸಹಿ ಯಾರದ್ದು ಎಂದರೆ ತನ್ನದು ಎಂದು ಒಪ್ಪಿಕೊಂಡಿರುತ್ತಾರೆ. ನಿಮ್ಮ ವಕಾಲತ್ ನಲ್ಲಿನ ಸಹಿ ಮತ್ತು ನಿಡಿ.1 ರಲ್ಲಿರುವ ಅರುಣ್ ಕೆ ಎಸ್ ಎಂಬ ಸಹಿ ಬೇರೆ ಬೇರೆ ಇದೆ ಎಂದರೆ ಸರಿ. ವಕಾಲತ್ ನಲ್ಲಿ ಮಾಡಿರುವ ಸಹಿಯಂತೆ ಬೇರೆ ದಾಖಲೆಗಳಲ್ಲಿ ಸಹಿ ಮಾಡುತ್ತೇನೆ ಎಂದು ತೋರಿಸಲು ಅಂತಹ ಯಾವುದೇ ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ಅಂತಹ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಸಹಿ ಮಾಡದೇ ಇರುವ ಖಾಲಿ ಚೆಕ್ ಯಾವುದೇ ಭದ್ರತೆಯನ್ನು ಒದಗಿಸುವುದಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ನಾನು ನಿಪಿ.1 ನ್ನು ಪಿರ್ಯಾದಿಗೆ ಸಹಿ ಮಾಡಿ ನೀಡಿದ್ದೆನು ಎಂದರೆ ಸರಿಯಲ್ಲ. ಬಸವರಾಜ ಎನ್ನುವವರು ಯಾರು ಎಂದು ಪಿರ್ಯಾದಿಗೆ ಗೊತ್ತಿಲ್ಲ

ಆದರೂ ಸಹ ಸದರಿ ಬಸವರಾಜ ರವರ ವ್ಯವಹಾರವನ್ನು ಮುಂದಿಟ್ಟುಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಸವರಾಜ ರವರಿಗೆ ಸುಮಾರು 10 ಕ್ಕಿಂತ ಹೆಚ್ಚು ಚೆಕ್ ಗಳನ್ನು ನೀಡಿರುತ್ತೇವೆ. ಸಾಕ್ಷಿಯು ಮುಂದುವರೆದು ನನ್ನ ತಾಯಿಯ ಚೆಕ್ ಗಳನ್ನು ಸಹ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಬಸವರಾಜ ರವರಿಂದ 3 ಲಕ್ಷ ರೂಗಳನ್ನು ಪಡೆದುಕೊಂಡಿದ್ದೇನೆ. ಸಾಮಾನ್ಯವಾಗಿ 3 ಲಕ್ಷ ರೂಗಳಿಗೆ 10 ಕ್ಕಿಂತ ಹೆಚ್ಚು ಚೆಕ್ ಗಳನ್ನು ಯಾರೂ ನೀಡುವುದಿಲ್ಲ ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ಮಾಹಿತಿ ಇರಲಿಲ್ಲ ಆದ್ದರಿಂದ ನೀಡಿರುತ್ತೇನೆ ಎಂದು ನುಡಿಯುತ್ತಾರೆ.  ಪಿರ್ಯಾದಿ ನೀಡಿದ ಲೀಗಲ್ ನೋಟಿಸ್ ನಿಪಿ.3 ಕ್ಕೆ ನಿಪಿ.1 ರಲ್ಲಿರುವ ಸಹಿ ನನ್ನದಲ್ಲ ಎಂದು ಉತ್ತರ ನೀಡಿದ್ದೀರಾ ಎಂದರೆ ಸಾಕ್ಷಿಯು ಉತ್ತರ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.1 ರಲ್ಲಿರುವ ಸಹಿ ನನ್ನದಲ್ಲ ಎಂದು ಪೊಲೀಸರಿಗೆ ಅಥವಾ ನ್ಯಾಯಾಲಯಕ್ಕೆ ದೂರು ನೀಡಿಲ್ಲ ಎಂದರೆ ಸರಿ. ಈ ರೀತಿ ದೂರು ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಪಿರ್ಯಾದಿ ಹಾಜರುಪಡಿಸಿದ ದಾಖಲೆಗಳನ್ನು ನಾನು ವಕೀಲರಿಂದ ಕೇಳಿ ತಿಳಿದುಕೊಂಡಿದ್ದೇನೆ. ನಿಪಿ.1 ಯಾವ ಕಾರಣಕ್ಕಾಗಿ ನಗದೀಕರಣವಾಗಿಲ್ಲ ಎಂದರೆ ನನಗೆ ನೆನಪಿಲ್ಲ. ಸದರಿ ನಿಪಿ.1 ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ನಗದೀಕರಣವಾಗದೇ ಪಿರ್ಯಾದಿಗೆ ಹಿಂದಿರುಗಿದೆ ಎಂದು ನನಗೆ ಮಾಹಿತಿ ಇಲ್ಲ. ಒಂದು ವೇಳೆ ನಿಪಿ.1 ಮೇಲಿನ ಸಹಿ ನನ್ನದಲ್ಲವಾಗಿದ್ದರೆ ಅದು ''Signature differs'' ಎಂದು ವಾಪಾಸ್ಸು ಬರುತ್ತಿತ್ತು ಎಂದರೆ ನನಗೆ ಮಾಹಿತಿ ಇಲ್ಲ.

ನೀವು ಬಸವರಾಜವರಿಗೆ ವಕೀಲರ ಮುಖಾಂತರ ಯಾವುದಾದರೂ ನೊಟೀಸ್ ಜಾರಿ ಮಾಡಿದ್ದೀರಾ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ದಿಃ 13.09.2020 ರಲ್ಲಿ ಬಸವರಾಜ ರವರಿಗೆ ವಕೀಲರ ಮುಖಾಂತರ ನೊಟೀಸ್ ನೀಡಿದ್ದೀರಿ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದಲರ್ಲಿರುವ ಸಹಿ ನಿಮ್ಮದು ಎಂದರೆ ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆಯನ್ನು ಮುಖಾಬಿಲೆಯಾಗಿ ನಿಪಿ.6 ಎಂದು ಗುರುತಿಸಲಾಯಿತು. ಸದರಿ ನೊಟೀಸ್ ನಿಪಿ.6 ರಲ್ಲಿ ನನ್ನ ಮತ್ತು ಬಸವರಾಜ ರವರ ನಡುವೆ ಯಾವುದೇ ವ್ಯವಹಾರ ಆಗಿಲ್ಲ ಎಂದು ಹೇಳಿದ್ದೇನೆ ಎಂದರೆ ನನಗೆ ನೆನಪಿಲ್ಲ. ದುರುದ್ದೇಶಪೂರ್ವಕವಾಗಿ ನಾನು ನೆನಪಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸವರಾಜರವರನ್ನು ಕರೆಯಿಸಿ ನಿಮ್ಮ ಪರವಾಗಿ ಸಾಕ್ಷ್ಯ ಮಾಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅವರೇ ಈ ಪ್ರಕರಣವನ್ನು ಪಿರ್ಯಾದಿಯ ಮೂಲಕ ದಾಖಲಿಸಿದ್ದರಿಂದ ಅವರನ್ನು ನಾನು ಕರೆಯಿಸಿ ಸಾಕ್ಷ್ಯ ಮಾಡಿಸುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.1 ರಲ್ಲಿರುವ ಸಹಿ ನನ್ನದು ಎಂದು ಪರೀಕ್ಷಿಸಲು ಅದನ್ನು ವೈಜ್ಞಾನಿಕ ಪ್ರಯೋಗಾಲಯಕ್ಕೆ ಕಳುಹಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ನಾನು ಪಿರ್ಯಾದಿಯಿಂದ ಹಣ ಪಡೆದು ಅದರ ಮರುಪಾವತಿಗಾಗಿ ನಿಪಿ.1 ರಂತೆ ಚೆಕ್ ನ್ನು ನೀಡಿದ್ದರೂ ಸಹ ಅವರಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ.1 ಲ್ಲಿರುವ ಸಹಿ ನನ್ನದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಕಷ್ಟು ಜನರಿಂದ ಹಣ ಪಡೆದು ಅವರಿಗೆ ಚಕ್ ಗಳನ್ನು ನೀಡಿ ಪ್ರಕರಣಗಳನ್ನು ದಾಖಲಿಸಿದ ನಂತರ ಚೆಕ್